## ದಿನವೊಂದಕ್ಕೆ 130

ರಾಷ್ಟ್ರೀಯ ಅಪರಾಧ ದಾಖಲೆ ವಿಭಾಗ (National Crime Records Beueau) ದಲ್ಲಿ ದೊರಕುವ ಅಂಕಿ ಅಂಶಗಳ ಪ್ರಕಾರ 2015 ರಲ್ಲಿ ದಿನವೊಂದಕ್ಕೆ ಸುಮಾರು 130 ಮಕ್ಕಳು ಕಾಣೆಯಾಗಿದ್ದಾರೆ. 2015ರಲ್ಲಿ ಕೇವಲ ಏಪ್ರಿಲ್ ತಿಂಗಳವರೆಗೆ ದಾಖಲಾದ ಅಂಕಿ ಅಂಶಗಳ ಪ್ರಕಾರ 15,988 ಮಕ್ಕಳು ಕಣ್ಮರೆ ಆಗಿದ್ದು ಅದರಲ್ಲಿ 6921 ಮಕ್ಕಳು ಪತ್ತೆ ಆಗದೆ ಹೋಗಿದ್ದಾರೆ.

| ವರ್ಷ | ಕಾಣೆಯಾದ ಮಕ್ಕಳು | ಪತ್ತೆ ಆಗದೆ ಹೋದದ್ದು |
|---|---|---|
| 2011 | 90,645 | 34,406 |
| 2012 | 65,038 | - |
| 2013 | 77,721 | - |
| 2012 | 73,549 | - |

ಬಚಪನ್ ಬಚಾವೋ ಆಂದೋಲನ ಎಂಬ ಸ್ವಯಂ ಸೇವಾ ಸಂಸ್ಥೆಯ ಅಂಕಿ ಅಂಶಗಳ ಪ್ರಕಾರ 2011ರಿಂದ ಈಚೆಗೆ ಸುಮಾರು 3.28 ಲಕ್ಷ ಮಕ್ಕಳು ಕಣ್ಮರೆ ಆಗಿದ್ದಾರೆ. ಅದರಲ್ಲಿ ಹೆಣ್ಣು ಮಕ್ಕಳು ಶೇಕಡಾ 60ಕ್ಕಿಂತ ಹೆಚ್ಚು.

ಈ ಸಂಸ್ಥೆಯ ಪ್ರಕಾರ ಅತಿ ಹೆಚ್ಚು ಮಕ್ಕಳು ಕಾಣೆ ಆಗುವ ರಾಜ್ಯಗಳಲ್ಲಿ ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ ಹಾಗೂ ಉತ್ತರ ಪ್ರದೇಶ ಸೇರಿವೆ. ಆದರೆ ಈ ರಾಜ್ಯಗಳಿಂದ ನಿಖರವಾದ ಅಂಕಿ ಅಂಶಗಳ ದಾಖಲಾತಿಯ ಕೊರತೆಯಿಂದಾಗಿ ನಿಜವಾದ ಚಿತ್ರಣ ಹೊರ ಬರುವುದಿಲ್ಲ. ಈ ಬಚಪನ್ ಬಚಾವೊ ಆಂದೋಲನ ಸರ್ವೋಚ್ಚ ನ್ಯಾಯಾಲಯದಲ್ಲಿ ಕಾಣೆಯಾದ ಮಕ್ಕಳ ಮಾಹಿತಿ ಹಾಗೂ ಪ್ರಕರಣಗಳ ಪ್ರಗತಿಯನ್ನು ಕೇಳಿದೆ. ಆದರೆ ಅನೇಕ ರಾಜ್ಯಗಳು ಇನ್ನೂ ಉತ್ತರ ಸಲ್ಲಿಸಿಲ್ಲ.

ಮುಖದಲ್ಲಿ ಏನು ವ್ಯತ್ಯಾಸ ಆಗಿದೆ ಎನ್ನುವುದೂ ಪೋಷಕರಿಗೆ ಗೊತ್ತಾಗುವುದಿಲ್ಲ. ಗೊತ್ತಾದರೂ ದುಡಿಮೆಯ ಒತ್ತಡದಲ್ಲಿ ಅದನ್ನು ಗಮನಿಸಿ, ನಾಲ್ಕು ಮಾತುಗಳನ್ನು ಆಡುವಷ್ಟು ಸಮಯವೂ ಇರುವುದಿಲ್ಲ. ಮಕ್ಕಳೇ ಏನಾದರೂ ದೂರುಗಳನ್ನು ಹೇಳಿದರೆ, 'ನಿಮ್ದು ಇದ್ದದ್ದೇ, ನೀನ್ಯಾಕೆ ಅವರ ಮನೆಗೆ ಹೋದೆ?' ಎಂದು ಜಬರಿಸಿ ಸಮಸ್ಯೆ ಅಲ್ಲೇ ಬಗೆಹರಿದಿದೆ ಎಂದು ಭಾವಿಸುವವರೇ ಹೆಚ್ಚು. ಇಂದಿನ ಕಾಲ ಹಾಗೂ ಬೇಡಿಕೆಗೆ ಅನುಗುಣವಾಗಿ ಜೀವನ ಶೈಲಿ ಹಾಗೂ ಕುಟುಂಬ ವ್ಯವಸ್ಥೆಯೂ ಬದಲಾಗಿದೆ. ಶಾಲೆ ಬಿಟ್ಟು ಬಂದ ಎಳೆಯ ಮಗು ತಾನೇ ಮನೆಯ ಬೀಗ ತೆಗೆದು, ಫ್ರಿಜ್‌ನಲ್ಲಿಟ್ಟ ತಣ್ಣನೆಯ ತಿಂಡಿಯನ್ನು ತಿಂದು ಹಸಿವು ನೀಗಿಸಿ ಅಪ್ಪ– ಅಮ್ಮ ಮನೆಗೆ ಬರುವುದನ್ನೇ ಕಾಯುವ ಕಾಲವಿದು. ಸ್ವಾತಂತ್ರ್ಯ ಎಂದರೆ ಏನು ಎನ್ನುವ ಯಾವ ಸ್ಪಷ್ಟ ಕಲ್ಪನೆಯೂ ಇಲ್ಲದ ವಯಸ್ಸಿನಲ್ಲಿ ಹೀಗೆ ದೊರಕುವ ಸ್ವಾತಂತ್ರ್ಯ ಪುಟ್ಟ ಮಕ್ಕಳನ್ನು ಎಂತೆಂತಹ ಅನಾಹುತಗಳತ್ತ ಎಳೆದೊಯ್ಯುತ್ತದೆ ಎನ್ನುವುದು ಗೊತ್ತೇ ಆಗುವುದಿಲ್ಲ.

ಬದಲಾದ ಜೀವನಶೈಲಿಯನ್ನು ದೂರುವುದರಿಂದ ಫಲವಿಲ್ಲ. ಈ ಹೊಸ ಜೀವನಶೈಲಿಯ ಒತ್ತಡಗಳನ್ನು ಹೇಗೆ ಎದುರಿಸಬೇಕೆಂಬುದನ್ನು ಪೋಷಕರು ತಿಳಿದುಕೊಳ್ಳಬೇಕಿದೆ. ಆದರೆ ಅವರಿಗೂ ಈ ನಿಟ್ಟಿನಲ್ಲಿ ಮಾರ್ಗದರ್ಶನ ಮಾಡುವವರಿಲ್ಲ. ಆದರೆ ಅತ್ಯಂತ ಕಡಿಮೆ ಸಮಯದಲ್ಲಿ ಅತ್ಯಂತ ಹೆಚ್ಚಿನದನ್ನು ಗಳಿಸಬೇಕು ಅಥವಾ ಕೂಡಿಡಬೇಕು ಎನ್ನುವ ನಮ್ಮ ದುರಾಸೆ ನಮ್ಮ ಮುಂದಿನ ಜನಾಂಗದ ಮನಃಶಾಂತಿಯನ್ನು ಬಲಿ ತೆಗೆದುಕೊಳ್ಳುತ್ತಿದೆ.

ಮಕ್ಕಳ ಸಮಾಜ ಪೋಷಕತ್ವಕ್ಕಾಗಿ ಶ್ರಮಿಸುತ್ತಿರುವ (RISP) ಎಂಬ ಸಂಸ್ಥೆಯ ಸ್ಥಾಪಕರಾದ ಕುಮಾರ್ ಜಾಗೀರದಾರ ಅವರ ಅಧ್ಯಯನದ ಪ್ರಕಾರ, ಮುರಿದ ಕುಟುಂಬಗಳಿಂದ ಬರುವ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆಗಳು ಶೇಕಡಾ 5ರಷ್ಟು ಹೆಚ್ಚು ಇರುತ್ತವೆ. ಹಾಗೆಯೇ ಭಗ್ನ ಕುಟುಂಬಗಳ ಮಕ್ಕಳು ಮಾದಕ ವ್ಯಸನಿಯಾಗುವ, ಅಪರಾಧಗಳಲ್ಲಿ ಪಾಲ್ಗೊಳ್ಳುವ, ವಿದ್ಯಾಭ್ಯಾಸವನ್ನು ಅರ್ಧದಲ್ಲೇ ಬಿಡುವ ಪ್ರಮಾಣವೂ ಹೆಚ್ಚು. ಮನೆಬಿಟ್ಟು ಓಡಿಹೋಗುತ್ತಿರುವ ಅಥವಾ ಕಣ್ಮರೆಯಾಗುತ್ತಿರುವ ಮಕ್ಕಳಲ್ಲಿ ಇಂತಹ ಕುಟುಂಬಗಳ ಮಕ್ಕಳ ಪ್ರಮಾಣ ಶೇಕಡಾ 32ರಷ್ಟು ಹೆಚ್ಚು.

### ಮಕ್ಕಳ ಕಳ್ಳರ ಕಾರ್ಯ ವೈಖರಿ

ಕೌಟುಂಬಿಕ ಸಮಸ್ಯೆಗಳನ್ನು ಒಂದು ಮಟ್ಟದವರೆಗೆ ಹೆತ್ತವರೇ ಕೌನ್ಸೆಲಿಂಗ್ ಮಾಡುವ ಮೂಲಕ ಬಗೆಹರಿಸಿಕೊಳ್ಳಬಹುದು. ಆದರೆ ಕ್ರಿಮಿನಲ್‌ಗಳ ಜಾಲದ ಕಬಂಧಬಾಹುಗಳಿಂದ ಮಕ್ಕಳನ್ನು ರಕ್ಷಿಸುವುದು ಹೇಗೆ ಎನ್ನುವುದು ಈಗ ಜ್ವಲಂತ ಸಮಸ್ಯೆಯಾಗಿದೆ. ಮಕ್ಕಳ ಕಳ್ಳರು ಅಥವಾ ಕಳ್ಳಸಾಗಣೆದಾರರ ಕೆಲಸದ ವಿಧಾನಗಳು ಮಕ್ಕಳ ಹಿನ್ನೆಲೆಯನ್ನು ಆಧರಿಸಿ ಬದಲಾಗುತ್ತಾ ಇರುತ್ತವೆ. ಈ ದುಷ್ಟಜಾಲ ಹೆಚ್ಚಾಗಿ ಬಡವರ ಹಾಗೂ ಕಾರ್ಮಿಕ ಸಮುದಾಯದವರ ಮಕ್ಕಳನ್ನು ಅಪಹರಿಸುವಾಗ ಅವರ ಬಡತನವನ್ನು ಗುರಿಯಾಗಿಸಿಕೊಳ್ಳುತ್ತದೆ. ಕೆಲವು ವಿಧಾನಗಳು ಹೀಗಿವೆ:

★ ಮಕ್ಕಳಿಗೆ ಹೆಚ್ಚಿಗೆ ಸಂಬಳ ಬರುವ ಕೆಲಸ ಕೊಡಿಸುವ ಆಮಿಷವೊಡ್ಡಿ ಹಳ್ಳಿಗಳಿಂದ ಕರೆದುಕೊಂಡು ಬಂದು ಕೆಲಸ ಕೊಡಿಸುವ ಕೇಂದ್ರಗಳ (Placement Agenices) ಮೂಲಕ ಮಾರಾಟ ಮಾಡಿ ಜೀತದಾಳುಗಳನ್ನಾಗಿ ಮಾಡಲಾಗುತ್ತದೆ.

★ ಕೆಲವೊಮ್ಮೆ ಬಡ ಹೆಣ್ಣುಮಕ್ಕಳನ್ನು ಅಡುಗೆ ಕೆಲಸ, ಮನೆಗೆಲಸ, ಹೋಟೆಲುಗಳಲ್ಲಿ ಕೆಲಸ, ಸಿನಿಮಾ ನಟಿಯ ಕೆಲಸ ಕೊಡಿಸುವ ನೆಪದಲ್ಲಿ ತಂದು ವೇಶ್ಯಾವೃತ್ತಿಗೆ ತಳ್ಳಲಾಗುತ್ತದೆ.




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ, ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

